**GOVERNMENT OF KARNATAKA**

**KARNATAKA LOKAYUKTA**

No.UPLOK-1/DE/580/2016/ARE-8

Multi Storied Building,
Dr. B.R. Ambedkar Veedhi,
Bengaluru-560001
Date: 13th December, 2022.

# RECOMMENDATION

Sub: Departmental Inquiry against Shri Hanamantha S/o Lakshman, the then Secretary, Khanapura Grama Panchayath (presently Secretary, Chattanahalli Gram Panchayath, Shahapur Taluk, Yadgir District (retired)-reg.

Ref: 1) Government Order No.ಗ್ರಾಅಪ/603/ಗ್ರಾಪಂಕಾ/2016, Bengaluru, dated: 26/10/2016.

2) Nomination Order No.UPLOK-1/DE/580/2016, Bengaluru, dated: 08/11/2016 of Upalokayukta, State of Karnataka, Bengaluru.

3) Inquiry Report dated: 09/12/2022 of Additional Registrar of Enquiries-8, Karnataka Lokayukta, Bengaluru.

*****

The Government by its order dated: 26/10/2016 initiated the disciplinary proceedings against Shri Hanamantha S/o Lakshman, the then Secretary, Khanapura Grama Panchayath (presently Secretary, Chattanahalli Gram Panchayath, Shahapur Taluk, Yadgir District (retired) (hereinafter referred to as

Delinquent Government Official, for short as DGO) and entrusted the Departmental Inquiry to this Institution.

2. This Institution by Nomination Order No.UPLOK-1/DE/580/ 2016, Bengaluru, dated: 08/11/2016 nominated Additional Registrar of Enquiries-8, Karnataka Lokayukta, Bengaluru, as the Inquiry Officer to frame charges and to conduct Departmental Inquiry against DGO for the alleged charge of misconduct, said to have been committed by him.

3. The DGO, Shri Hanamantha S/o Lakshman, the then Secretary, Khanapura Grama Panchayath (presently Secretary, Chattanahalli Gram Panchayath, Shahapur Taluk, Yadgir District (retired) was tried for the following charges:

<u>**ಅನುಬಂಧ-1**</u>

<u>**ದೋಷಾರೋಪಣೆ-1**</u>

ಶ್ರೀ.ಹಣಮಂತ ಬಿನ್ ಲಕ್ಷ್ಮಣ, ಹಿಂದಿನ ಕಾರ್ಯದರ್ಶಿ, ಖಾನಾಪುರ ಗ್ರಾಮ ಪಂಚಾಯಿತಿ, ಪ್ರಸ್ತುತ ಕಾರ್ಯದರ್ಶಿ, ಚಟ್ನಳ್ಳಿ ಗ್ರಾಮ ಪಂಚಾಯಿತಿ, ಶಹಾಪುರ ತಾಲ್ಲೂಕು, ಯಾದಗಿರಿ ಜಿಲ್ಲೆ – ಆಪಾದಿತ ಸರ್ಕಾರಿ ನೌಕರರು ನೀವು ಕರ್ತವ್ಯ ನಿರ್ವಹಿಸುತ್ತಿದ್ದಾಗ ನಿಮ್ಮ ಸ್ವಂತ ಲಾಭಕ್ಕಾಗಿ ರೂ.2,22,000/– ಗಳನ್ನು ಉಪಯೋಗಿಸಿಕೊಂಡು ಗ್ರಾಮ ಪಂಚಾಯಿತಿಯ ಸಂಪೂರ್ಣ ಸ್ವಚ್ಛತಾ ಆಂದೋಲನಾ ಯೋಜನೆ ಅಡಿಯಲ್ಲಿನ ಹಣವನ್ನು ಕೆಲಸಕ್ಕೆ ಉಪಯೋಗಿಸದೇ ನಿಮ್ಮ ಸ್ವಂತಕ್ಕಾಗಿ ಉಪಯೋಗಿಸಿಕೊಂಡು ಯೋಜನೆಗೆ ಮತ್ತು ಸರ್ಕಾರಕ್ಕೆ ಮೋಸ ಮಾಡಿರುತ್ತೀರಿ". ಆದಕಾರಣ ಸರ್ಕಾರಿ ಆಪಾದಿತ ನೌಕರರಾದ ನೀವು ಸಾರ್ವಜನಿಕ/ಸರ್ಕಾರಿ ಸೇವಕರಾಗಿದ್ದು, ನಿಮ್ಮ ಕರ್ತವ್ಯಪಾಲನೆಯಲ್ಲಿ ಪರಿಪೂರ್ಣ ಕರ್ತವ್ಯ ನಿಷ್ಠೆಯನ್ನು ತೋರಿಸದೆ ಸ್ವಂತ ಲಾಭಕ್ಕಾಗಿ ಸಾರ್ವಜನಿಕ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಿದ್ದು, ನೀವು ಕರ್ನಾಟಕ ಸರ್ಕಾರಿ ಸೇವಾ (ಸದ್ವರ್ತನೆ) ನಿಯಮಾವಳಿ 1966ರ (3)(1)(i) ಮತ್ತು (iii)ನೇ ನಿಬಂಧನೆಯನ್ನು ಉಲ್ಲಂಘಿಸಿ ದುರ್ನಡತೆ ಎಸಗಿದ್ದೀರಿ.

4. The Inquiry Officer (Additional Registrar of Enquiries-8) on proper appreciation of oral and documentary evidence has held that, the Disciplinary Authority has **'Proved'** the charges leveled against DGO, Shri Hanamantha S/o Lakshman, the then Secretary, Khanapura Grama Panchayath (presently Secretary, Chattanahalli Gram Panchayath, Shahapur Taluk, Yadgir District (retired).

5. On perusal of the Inquiry Report, in order to prove the guilt of the DGO, the Disciplinary Authority has examined two witnesses i.e., PW-1 and PW-2 and Ex. P-1 to P-3 documents were got marked.

6. On re-consideration of Inquiry Report and taking note of the totality of the circumstances of the case, I do not find any reason to interfere with the findings recorded by the Inquiry Officer. Therefore, it is hereby recommended to the Government to accept the report of the Inquiry Officer.

7. As per the First Oral Statement of DGO furnished by the Inquiry Officer, DGO, Shri Hanamantha S/o Lakshman has retired from service on 31/05/2016.

8. Having regard to the nature of charge **'Proved'** against DGO, Shri Hanamantha S/o Lakshman, the then Secretary, Khanapura Grama Panchayath (presently Secretary, Chattanahalli Gram Panchayath, Shahapur Taluk, Yadgir District (retired) and on consideration of the totality of circumstances:-

> "It is hereby recommended to the Government to impose penalty of withholding 10% of pension payable to DGO, Shri Hanamantha S/o Lakshman, the then Secretary, Khanapura Grama Panchayath (presently Secretary, Chattanahalli Gram Panchayath, Shahapur Taluk, Yadgir District (retired) for a period of 5 years".

9. Action taken in the matter shall be intimated to this Authority.

Connected records are enclosed herewith.

13/12/22

**(JUSTICE K.N.PHANEENDRA)**
UPALOKAYUKTA-2,
STATE OF KARNATAKA.

# ಕರ್ನಾಟಕ ಲೋಕಾಯುಕ್ತ

ನಂ.ಉಪಲೋಕ್-1/ಡಿಇ/580/2016/ಎಆರ್‌ಇ-8

ಡಾ॥ ಬಿ.ಆರ್.ಅಂಬೇಡ್ಕರ್ ವೀಧಿ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು-560001,
ದಿನಾಂಕ:-09.12.2022.

## :: ವಿಚಾರಣಾ ವರದಿ ::

**ಉಪಸ್ಥಿತರು:** **ರಾಜಶೇಖರ.ವಿ.ಪಾಟೀಲ**
ಅಪರ ನಿಬಂಧಕರು ವಿಚಾರಣೆಗಳು-8,
ಕರ್ನಾಟಕ ಲೋಕಾಯುಕ್ತ,
ಬೆಂಗಳೂರು.

**ವಿಷಯ:** ಶ್ರೀ.ಹನಮಂತ ತಂದೆ ಲಕ್ಷ್ಮಣ, ಹಿಂದಿನ ಕಾರ್ಯದರ್ಶಿ, ಖಾನಾಪುರ ಗ್ರಾಮ ಪಂಚಾಯಿತಿ, ಪ್ರಸ್ತುತ ಕಾರ್ಯದರ್ಶೀ, ಚಟ್ನಳ್ಳಿ ಗ್ರಾಮ ಪಂಚಾಯಿತಿ, ಶಹಪೂರ ತಾಲ್ಲೂಕು, ಯಾದಗಿರಿ ಜಿಲ್ಲೆ (ನಿವೃತ್ತ) ಇವರ ವಿರುದ್ಧದ ಇಲಾಖಾ ವಿಚಾರಣೆ ಕುರಿತು.

**ಉಲ್ಲೇಖ:**

1.ಕಂಪ್ಲೇಂಟ್/ಉಪಲೋಕ್/ಜಿಎಲ್‌ಬಿ/1206/2016/ಉನಿವಿ-3 ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(3) ರನ್ವಯ ವರದಿ ದಿನಾಂಕ: 08.09.2016.

2.ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ/603/ಗ್ರಾಪಂಕಾ/2016 ಬೆಂಗಳೂರು, ದಿನಾಂಕ:26.10.2016

3.ನಾಮನಿರ್ದೇಶನ ಸಂಖ್ಯೆ.ಉಪಲೋಕ್-1/ಡಿಇ-580/2016 ಬೆಂಗಳೂರು, ದಿನಾಂಕ:08.11.2016

*****

1. ಪ್ರಸ್ತುತ ದೂರನ್ನು ದೂರುದಾರರಾದ ಶ್ರೀ.ಹೆಚ್.ಮಲ್ಲಿಕಾರ್ಜುನ, ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯಿತಿ, ಶಹಪೂರ ಜಿಲ್ಲೆ ರವರು ಆಸನೌ ಶ್ರೀ.ಹನಮಂತ ಬಿನ್ ಲಕ್ಷ್ಮಣ, ಹಿಂದಿನ ಕಾರ್ಯದರ್ಶಿ, ಖಾನಾಪುರ ಗ್ರಾಮ ಪಂಚಾಯಿತಿ, ಪ್ರಸ್ತುತ ಕಾರ್ಯದರ್ಶಿ, ಚಟ್ನಳ್ಳಿ ಗ್ರಾಮ ಪಂಚಾಯಿತಿ, ಶಹಪೂರ ತಾಲ್ಲೂಕು, ಯಾದಗಿರಿ ಜಿಲ್ಲೆ (ನಿವೃತ್ತ) ಇವರ ವಿರುದ್ಧ ಸಲ್ಲಿಸಿರುತ್ತಾರೆ.
2. ದೂರುದಾರರಾದ ಶ್ರೀ.ಹೆಚ್.ಮಲ್ಲಿಕಾರ್ಜುನ, ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯಿತಿ, ಶಹಪೂರ ಜಿಲ್ಲೆ ಇವರು ಆಸನೌ ಶ್ರೀ.ಹನಮಂತ ಬಿನ್

ಲಕ್ಷ್ಮಣ, ಹಿಂದಿನ ಕಾರ್ಯದರ್ಶೀ, ಖಾನಾಪುರ ಗ್ರಾಮ ಪಂಚಾಯಿತಿ, ಪ್ರಸ್ತುತ ಕಾರ್ಯದರ್ಶೀ, ಚಟ್ನಳ್ಳಿ ಗ್ರಾಮ ಪಂಚಾಯಿತಿ, ಶಹಪೂರ ತಾಲ್ಲೂಕು, ಯಾದಗಿರಿ ಜಿಲ್ಲೆ (ನಿವೃತ್ತ) ರವರು ಒಬ್ಬ ಸರ್ಕಾರಿ ನೌಕರರಾಗಿದ್ದು, ಕರ್ತವ್ಯದಲ್ಲಿ ದುರ್ನಡತೆವೆಸಗಿ ಹಾಗೂ ಸರ್ಕಾರಿ ಹಣವನ್ನು ದುರುಪಯೋಗಪಡಿಸಿಕೊಂಡಿರುವುದಾಗಿ ಆರೋಪ ಮಾಡಿದ್ದಾರೆ.

3. ಸದರಿ ಆರೋಪದಲ್ಲಿ ದೂರುದಾರ ಮಲ್ಲಿಕಾರ್ಜುನ ರವರು ಸಲ್ಲಿಸಿದ ದೂರಿನಲ್ಲಿ ಆರೋಪ ಮಾಡುತ್ತಾ ಆಸನೌ ರವರು ಸದರಿ ಗ್ರಾಮ ಪಂಚಾಯಿತಿಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾಗ ಗ್ರಾಮ ಪಂಚಾಯಿತಿ ಸಂಪೂರ್ಣ ಸ್ವಚ್ಛತಾ ಯೋಜನೆಯಲ್ಲಿ ಮಂಜೂರಾದ ರೂ.2.22.000/- ಗಳಷ್ಟು ಹಣವನ್ನು ಯೋಜನೆಯ ಉದ್ದೇಶಕ್ಕಾಗಿ ಉಪಯೋಗಿಸದೇ ತಮ್ಮ ಸ್ವಂತ ಲಾಭಕ್ಕಾಗಿ ದುರ್ಬಳಕೆ ಮಾಡಿಕೊಂಡು ಕರ್ತವ್ಯ ಲೋಪ ಮತ್ತು ಲೋಕ ನೌಕರರಾಗಿ ದುರ್ನಡತೆಯಿಂದ ಕಾರ್ಯ ನಿರ್ವಹಿಸಿದ್ದು ಆರೋಪ ಮಾಡಲಾಗಿದೆ.

4. ಸದರಿ ದೂರುದಾರರ ದೂರು ಅರ್ಜಿ ಆಧಾರದಲ್ಲಿ ಕರ್ನಾಟಕ ಲೋಕಾಯುಕ್ತ ಸಂಸ್ಥೆ ತನಿಖೆ ಮಾಡಿ ತನಿಖೆ ಪೂರ್ಣಗೊಂಡ ನಂತರ ಸರ್ಕಾರಕ್ಕೆ ಕರ್ನಾಟಕ ಲೋಕಾಯುಕ್ತ ಅಧಿನಿಯಮದ ಕಲಂ12(3) ರಡಿಯಲ್ಲಿ ಉಲ್ಲೇಖ(1) ರಲ್ಲಿ ಕಾಣಿಸಿದಂತೆ ದಿನಾಂಕ 08.09.2016 ರಂದು ವರದಿ ಸಲ್ಲಿಸಿದ್ದು, ಸದರಿ ವರದಿಯನ್ವಯ ಕರ್ನಾಟಕ ಸರ್ಕಾರವು ಉಲ್ಲೇಖ(2) ರಲ್ಲಿ ದಿ:26.10.2016 ರಂದು ಉಲ್ಲೇಖಿಸಿದ್ದಾರೆ. ಅದರ ಆಧಾರದಲ್ಲಿ ಮಾನ್ಯ ಲೋಕಾಯುಕ್ತ ರವರು ದಿನಾಂಕ: 08.11.2016 ರಂದು ಅಪರ ನಿಬಂಧಕರು (ವಿಚಾರಣೆಗಳು)-8 ರವರಿಗೆ ವಿಚಾರಣೆ ಮಾಡಿ ವರದಿ ಸಲ್ಲಿಸುವಂತೆ ಉಲ್ಲೇಖ (3) ರಲ್ಲಿ ಕಾಣಿಸಿದಂತೆ ನಾಮನಿರ್ದೇಶನ ಮಾಡಿರುತ್ತಾರೆ.

5. ಮೇಲಿನ ಆರೋಪದಡಿಯಲ್ಲಿ ಕರ್ನಾಟಕ ಲೋಕಾಯುಕ್ತ ಸಂಸ್ಥೆ ಕಂಪ್ಲೇಂಟ್/ಉಪಲೋಕ್/ಜಿಎಲ್‌ಬಿ/1206/2016/ಉನಿವಿ-3 ಪ್ರಕರಣವನ್ನು ನೋಂದಾಯಿಸಿ ಕರ್ನಾಟಕ ಲೋಕಾಯುಕ್ತ ಅಧಿನಿಯಮ 1984 ಕಲಂ 7(2) ರಡಿಯಲ್ಲಿ ತನಿಖೆ ಮಾಡಿ ಅಂತ್ಯಗೊಳಿಸಿ ಕರ್ನಾಟಕ ಲೋಕಾಯುಕ್ತ ಅಧಿನಿಯಮ 1984 ಕಲಂ 12(3) ರಡಿಯಲ್ಲಿ ಸಕ್ಷಮ ಪ್ರಾಧಿಕಾರಕ್ಕೆ ಆಸನೌ ರವರ ವಿರುದ್ಧ ಇಲಾಖಾ ವಿಚಾರಣಾ ತನಿಖೆ ಕೈಗೊಳ್ಳಲು ವರದಿಯನ್ನು ಉಲ್ಲೇಖ (1)ರಂತೆ ಕೇಳಿಕೊಳ್ಳಲಾಯಿತು.

9/12

6. ಆಸನೌ ರವರ ಸಕ್ಷಮ ಪ್ರಾಧಿಕಾರ ಲೋಕಾಯುಕ್ತ ಸಂಸ್ಥೆಯ ವರದಿಯನ್ನು ಪರಿಗಣಿಸಿ ಆಸನೌ ರವರ ಮೇಲೆ ತನಿಖೆ ಕೈಗೊಳ್ಳಲು ಉಲ್ಲೇಖ (2) ರಂತೆ ಸರ್ಕಾರಿ ಅಧಿಸೂಚನೆಯನ್ನು ಹೊರಡಿಸಿ ವಿಚಾರಣೆಯನ್ನು ಕೈಗೆತ್ತಿಕೊಳ್ಳಲು ಲೋಕಾಯುಕ್ತ ಸಂಸ್ಥೆಗೆ ನಾವು ನಿರ್ದೇಶನ ಮಾಡಿದೆ.
7. ಸದರಿ ಸರ್ಕಾರಿ ಅಧಿಸೂಚನೆ ಆದಾರದ ಮೇಲೆ ಲೋಕಾಯುಕ್ತ ಸಂಸ್ಥೆ ಉಲ್ಲೇಖ(3) ರಡಿಯಲ್ಲಿ ಉಪಲೋಕ್/ಡಿಇ/580/2016 ಉಲ್ಲೇಖ (2) ರಂತೆ ಆದೇಶ ಮಾಡಿದೆ.
8. ನಾಮನಿರ್ದೇಶನದಂತೆ ಆಪಾದಿತ ಸರ್ಕಾರಿ ನೌಕರ ಶ್ರೀ.ಹೆಚ್.ಮಲ್ಲಿಕಾರ್ಜುನ, ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯಿತಿ, ಶಹಪೂರ ಜಿಲ್ಲೆ ರವರು ಆಸನೌ ಶ್ರೀ.ಹನಮಂತ ತಂದೆ ಲಕ್ಷ್ಮಣ, ಹಿಂದಿನ ಕಾರ್ಯದರ್ಶೀ, ಖಾನಾಪುರ ಗ್ರಾಮ ಪಂಚಾಯಿತಿ, ಪ್ರಸ್ತುತ ಕಾರ್ಯದರ್ಶೀ, ಚಟ್ನಳ್ಳಿ ಗ್ರಾಮ ಪಂಚಾಯಿತಿ, ಶಹಪೂರ ತಾಲ್ಲೂಕು, ಯಾದಗಿರಿ ಜಿಲ್ಲೆ ಇವರ ವಿರುದ್ಧ ಅಪರ ನಿಬಂಧಕರು (ವಿಚಾರಣೆಗಳು)-8 ರವರು ದೋಷಾರೋಪಣಾ ಪಟ್ಟಿಯನ್ನು ರಚಿಸಿದ್ದು, ವಿವರಗಳುಳ್ಳ ಆರೋಪವನ್ನು ಆ.ಸ.ನೌ ರವರಿಗೆ ಸಮನ್ಸ್‌ನೊಂದಿಗೆ ಲಗತ್ತಿಸಿ ದಿನಾಂಕ: 15.02.2017 ರಂದು ಈ ಕೆಳಕಂಡಂತೆ ಕಳುಹಿಸಲಾಗಿರುತ್ತದೆ.

***<u>ಅನುಬಂಧ-1</u>***

***<u>ದೋಷಾರೋಪಣೆ-1</u>***

9. ಶ್ರೀ.ಹಣಮಂತ ಬಿನ್ ಲಕ್ಷ್ಮಣ, ಹಿಂದಿನ ಕಾರ್ಯದರ್ಶಿ, ಖಾನಾಪುರ ಗ್ರಾಮ ಪಂಚಾಯಿತಿ. ಪ್ರಸ್ತುತ ಕಾರ್ಯದರ್ಶಿ. ಚಟ್ನಳ್ಳಿ ಗ್ರಾಮ ಪಂಚಾಯಿತಿ, ಶಹಾಪುರ ತಾಲ್ಲೂಕು, ಯಾದಗಿರಿ ಜಿಲ್ಲೆ – ಆಪಾದಿತ ಸರ್ಕಾರಿ ನೌಕರರು ನೀವು ಕರ್ತವ್ಯ ನಿರ್ವಹಿಸುತ್ತಿದ್ದಾಗ ನಿಮ್ಮ ಸ್ವಂತ ಲಾಭಕ್ಕಾಗಿ ರೂ.2,22,000/- ಗಳನ್ನು ಉಪಯೋಗಿಸಿಕೊಂಡು ಗ್ರಾಮ ಪಂಚಾಯಿತಿಯ ಸಂಪೂರ್ಣ ಸ್ವಚ್ಛತಾ ಆಂದೋಲನಾ ಯೋಜನೆ ಅಡಿಯಲ್ಲಿನ ಹಣವನ್ನು ಕೆಲಸಕ್ಕೆ ಉಪಯೋಗಿಸದೇ ನಿಮ್ಮ ಸ್ವಂತಕ್ಕಾಗಿ ಉಪಯೋಗಿಸಿಕೊಂಡು ಯೋಜನೆಗೆ ಮತ್ತು ಸರ್ಕಾರಕ್ಕೆ ಮೋಸ ಮಾಡಿರುತ್ತೀರಿ". ಆದಕಾರಣ ಸರ್ಕಾರಿ ಆಪಾದಿತ ನೌಕರರಾದ ನೀವು ಸಾರ್ವಜನಿಕ/ಸರ್ಕಾರಿ ಸೇವಕರಾಗಿದ್ದು, ನಿಮ್ಮ ಕರ್ತವ್ಯಪಾಲನೆಯಲ್ಲಿ ಪರಿಪೂರ್ಣ ಕರ್ತವ್ಯ ನಿಷ್ಠೆಯನ್ನು ತೋರಿಸದೆ ಸ್ವಂತ ಲಾಭಕ್ಕಾಗಿ ಸಾರ್ವಜನಿಕ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಿದ್ದು, ನೀವು ಕರ್ನಾಟಕ ಸರ್ಕಾರಿ ಸೇವಾ

(ಸದ್ವರ್ತನೆ) ನಿಯಮಾವಳಿ 1966ರ (3)(1)(i) ಮತ್ತು (iii)ನೇ ನಿಬಂಧನೆಯನ್ನು ಉಲ್ಲಂಘಿಸಿ ದುರ್ನಡತೆ ಎಸಗಿದ್ದೀರಿ.

### ಅನುಬಂಧ-2

### ದೋಷಾರೋಪಣೆಯ ವಿವರ

(ಸ್ಟೇಟ್‌ಮೆಂಟ್ ಆಫ್ ಇಂಪ್ಯೂಟೇಷನ್ ಆಫ್ ಮಿಸ್‌ಕಾಂಡೆಕ್ಟ್)

10. ಶ್ರೀ.ಹೆಚ್.ಮಲ್ಲಿಕಾರ್ಜುನ ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕ್ ಪಂಚಾಯತ್, ಶಹಾಪುರ ರವರು (ಇನ್ನು ಮುಂದು ದೂರುದಾರರು ಎಂದು ಕರೆಯಲ್ಪಡುವ) ಶ್ರೀ.ಹಣಮಂತ ಬಿನ್ ಲಕ್ಷ್ಮಣ, ಹಿಂದಿನ ಕಾರ್ಯದರ್ಶಿ, ಖಾನಾಪುರ ಗ್ರಾಮ ಪಂಚಾಯತ್, ಪ್ರಸ್ತುತ ಕಾರ್ಯದರ್ಶಿ, ಚಟ್ನಳ್ಳಿ ಗ್ರಾಮ ಪಂಚಾಯತ್ ಶಹಾಪುರ ತಾಲ್ಲೂಕ್, ಯಾದಗಿರಿ ಜಿಲ್ಲೆ, ಯಾದಗಿರಿ (ನಿವೃತ್ತ) ಆದ ನಿಮ್ಮ ವಿರುದ್ಧ ಪೋಲೀಸ್ ಉಪಾಧೀಕ್ಷಕರು, ವರಗೇರಾ ಪೋಲೀಸ್ ಠಾಣೆ, ಯಾದಗಿರಿ ಜಿಲ್ಲೆ, ಯಾದಗಿರಿರವರಿಗೆ ದೂರನ್ನು ನೀಡಿರುತ್ತಾರೆ. ಈ ಸಂಬಂಧ ಆಪಾದಿತ ಸರ್ಕಾರಿ ನೌಕರರು ಒಬ್ಬ ಸರ್ಕಾರಿ ನೌಕರರಾಗಿದ್ದು, ಕರ್ತವ್ಯದಲ್ಲಿ ದುರ್ನಡತೆ ತೋರಿಸಿರುತ್ತಾರೆ ಎಂದು ವರದಿ ಸಲ್ಲಿಸಿದ ಮೇರೆಗೆ ದಾಖಲಾತಿಗಳನ್ನು ಪರಿಶೀಲಿಸಿದಾಗ, ಆಪಾದಿತ ಸರ್ಕಾರಿ ನೌಕರರು ದುರ್ನಡತೆ ಹಾಗೂ ಸರ್ಕಾರಿ ಹಣವನ್ನು ದುರುಪಯೋಗಪಡಿಸಿಕೊಂಡಿರುವುದು ಮೇಲ್ನೋಟಕ್ಕೆ ಕಂಡುಬಂದಿದ್ದರಿಂದ ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984ರ ಕಲಂ 7(2)ರನ್ವಯ ಗೌರವಾನ್ವಿತ ಉಪಲೋಕಾಯುಕ್ತರು ತನಿಖೆ ಕೈಗೊಳ್ಳಲಾಗಿರುತ್ತದೆ.

11. ಆಪಾದಿತ ಸರ್ಕಾರಿ ನೌಕರರ ಮೇಲಿರುವ ಆಪಾದನೆಗಳ ಸಂಕ್ಷಿಪ್ತ ಸಾರಾಂಶ:

(ಅ) ಖಾನಾಪುರ ಗ್ರಾಮ ಪಂಚಾಯಿತಿಗೆ 2010-11 ನೇ ಸಾಲಿನ ಸಂಪೂರ್ಣ ಸ್ವಚ್ಛತಾ ಆಂದೋಲನಾ ಅನುಷ್ಠಾನಗೊಳಿಸಲು ಜಿಲ್ಲಾ ಪಂಚಾಯಿತಿಯಿಂದ ಖಾನಾಪುರ ಗ್ರಾಮ ಪಂಚಾಯಿತಿಗೆ ಒಟ್ಟು ರೂ.2,25,000/-ಗಳು ಅನುದಾನ ಮಂಜೂರಾಗಿ ಬಂದಿರುತ್ತದೆ. ಮಂಜೂರಾಗಿ ಬಂದ ಹಣವನ್ನು ಶ್ರೀ.ಸುಬ್ರಮಣ್ಯ ಶೆಟ್ಟಿ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಸಾ.ರಾಮಸಾಗರ, ಹೊಸಪೇಟೆ ತಾಲ್ಲೂಕು, ರವರು ಅನುದಾನ ಹಣವನ್ನು ಖಾನಾಪುರ ಗ್ರಾಮ ಪಂಚಾಯಿತಿ ಸಂಪೂರ್ಣ ಸ್ವಚ್ಛತಾ ಯೋಜನೆ ಅಡಿಯ ಕೃಷ್ಣಾ ಗ್ರಾಮೀಣ ಬ್ಯಾಂಕ್ ಶಹಾಪುರದಲ್ಲಿ ಖಾತೆ ನಂ.2044098568 ನೇದ್ದಕೆ

ಜಮಾ ಮಾಡಿರುತ್ತಾರೆ ಹಾಗೂ ಸದರಿ ಹಣವು ದಿನಾಂಕ:9-12-2010ರಂದು ಖಾತೆಗೆ ಜಮಾ ಆಗಿರುತ್ತದೆ.

(ಆ) ಶ್ರೀ.ಸುಬ್ರಹ್ಮಣ್ಯ ರವರು ಆರಾಮಿಲ್ಲದ ಕಾರಣ ರಜೆಯ ಮೇಲೆ ಹೋಗಿದ್ದು, ನಂತರ ರಜೆಯಿಂದ ಮರಳಿ ಬರುವಷ್ಟರಲ್ಲಿ ಸದರಿ ಖಾತೆಯಲ್ಲಿ ಜಮಾ ಇದ್ದ ಹಣವನ್ನು ಆಪಾದಿತ ಸರ್ಕಾರಿ ನೌಕರರು ಕೃಷ್ಣಾ ಗ್ರಾಮೀಣ ಬ್ಯಾಂಕ್ ಶಹಾಪುರದಲ್ಲಿರುವ ಖಾತೆ ನಂ.2044098568 ನೇದ್ದರಿಂದ ದಿನಾಂಕ:11-3-2011ರಂದು ಚೆಕ್ ನಂ.391323 ನೇದ್ದರಿಂದ ಒಟ್ಟು ರೂ.1,20,000/- ಗಳನ್ನು ದಿನಾಂಕ:12-3-2011 ರಂದು ಚೆಕ್ ನಂ.391324 ನೇದ್ದರಿಂದ ರೂ.391324 ನೇದ್ದರಿಂದ ರೂ.20,000/- ಗಳನ್ನು ಮತ್ತು ದಿನಾಂಕ:14-3-2011 ರಂದು ಚೆಕ್ ನಂ.391325 ನೇದ್ದರಿಂದ ರೂ.82,000/- ಗಳನ್ನು ಹೀಗೆ ಒಟ್ಟು ರೂ.2,22,000/- ಗಳನ್ನು ಮೋಸ ಮಾಡುವ ಉದ್ದೇಶದಿಂದ ಹೊಸದಾಗಿ ಬಂದ ಶ್ರೀ.ಸುಬ್ರಹ್ಮಣ್ಯ ರವರಿಗೆ ಚಾರ್ಜನಲ್ಲಿ ಯೋಜನೆಗೆ ಸಂಬಂಧಪಟ್ಟ ಚೆಕ್ ಪುಸ್ತಕವನ್ನು ಕೊಡದೇ ಆಪಾದಿತ ಸರ್ಕಾರಿ ನೌಕರರು ತನ್ನ ಬಳಿ ಇಟ್ಟುಕೊಂಡು (1) ಶ್ರೀ.ಸುಬ್ರಹ್ಮಣ್ಯ ಮತ್ತು (2) ಶ್ರೀಮತಿ.ಮಲ್ಲಮ್ಮ ಗಂಡ ರಂಗಪ್ಪ ಆಲೂರ, ಅಧ್ಯಕ್ಷರು, ಖಾನಾಪುರ ಗ್ರಾಮ ಪಂಚಾಯಿತಿ ರವರುಗಳ ನಕಲು ಸಹಿಗಳನ್ನು ಮಾಡಿ, ನಕಲಿ ರುಜು ಮತ್ತು ದಾಖಲೆ ಸೃಷ್ಟಿಸಿ ಹಣವನ್ನು ಡ್ರಾ ಮಾಡಿಕೊಂಡು ಆಪಾದಿತ ಸರ್ಕಾರಿ ನೌಕರರು ತನ್ನ ಸ್ವಂತ ಲಾಭಕ್ಕಾಗಿ ಉಪಯೋಗಿಸಿಕೊಂಡು ಗ್ರಾಮ ಪಂಚಾಯಿತಿಯ ಸಂಪೂರ್ಣ ಸ್ವಚ್ಛತಾ ಆಂದೋಲನಾ ಯೋಜನೆ ಅಡಿಯಲ್ಲಿನ ಹಣವನ್ನು ಕೆಲಸಕ್ಕೆ ಉಪಯೋಗಿಸದೇ ತನ್ನ ಸ್ವಂತಕ್ಕಾಗಿ ಉಪಯೋಗಿಸಿಕೊಂಡು ಯೋಜನೆಗೆ ಮತ್ತು ಸರ್ಕಾರಕ್ಕೆ ಮೋಸ ಮಾಡಿರುತ್ತಾರೆ.

12. ದೂರುದಾರರು ದಿನಾಂಕ:29-12-2014 ರಂದು ಯಾದಗಿರಿ ಜಿಲ್ಲೆ, ಶಹಾಪುರ ತಾಲ್ಲೂಕ್, ವಡಗೇರಾ ಪೊಲೀಸ್ ಠಾಣೆಯ ಠಾಣಾಧಿಕಾರಿಯವರ ಮುಂದೆ ದೂರನ್ನು ಸಲ್ಲಿಸಿರುತ್ತಾರೆ. ಅದರಂತೆ, ಠಾಣಾಧಿಕಾರಿಯವರು ಸದರಿ ಪೊಲೀಸ್ ಠಾಣೆಯಲ್ಲಿ ಮೊಕದ್ದಮೆ ಸಂಖ್ಯೆ:79/2011 ಕಲಂ.406,408,420,468,471 ಆಫ್ ಐ.ಪಿ.ಸಿ.ರ ಪ್ರಕಾರ ಆಪಾದಿತ ಸರ್ಕಾರಿ ನೌಕರರ ವಿರುದ್ಧ ಕ್ರಿಮಿನಲ್ ಪ್ರಕರಣವನ್ನು

9/12

ದಾಖಲಿಸಿಕೊಂಡು, ಪ್ರಥಮ ವರ್ತಮಾನ ವರದಿಯನ್ನು ಮಾನ್ಯ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತಾರೆ.

13. ಈ ಸಂಬಂಧ, ಆಪಾದಿತ ಸರ್ಕಾರಿ ನೌಕರರ ವಿರುದ್ಧ ಶಹಾಪುರ ನ್ಯಾಯಾಲಯದಲ್ಲಿ ಪ್ರಕರಣದ ಸಿ.ಸಿ.ನಂ:400/2013ರ ಪ್ರಕಾರ ದಾವೆ ದಾಖಲಾಗಿರುತ್ತದೆ.

14. ಆಪಾದಿತ ಸರ್ಕಾರಿ ನೌಕರರು ರೂ.2,22,000/- ಗಳನ್ನು ನೇರವಾಗಿ ಯಾವುದೇ ದಾಖಲೆಗಳಿಲ್ಲದೇ ಹಂತ-ಹಂತವಾಗಿ ಹಣ ಸೆಳೆದಿರುವುದರಿಂದ ಸರ್ಕಾರದ ಹಣ ದುರುಪಯೋಗವಾಗಿದೆ ಎಂದು ದೂರುದಾರರು ವರದಿ ಮಾಡಿದ್ದರಿಂದ ಆಪಾದಿತ ಸರ್ಕಾರಿ ನೌಕರರ ವಿರುದ್ಧ ಇಲಾಖಾ ವಿಚಾರಣಾ ಬಾಕಿ ಇರಿಸಿ ಕರ್ನಾಟಕ ನಾಗರೀಕ ಸೇವಾ ನಿಯಮ (ಸಿ.ಸಿ.ಎ) 1957, ರ ನಿಯಮ 10(ಬಿ) ರನ್ವಯ ಅಮಾನತ್ತಿಲ್ಲಡುವಂತೆ ಮುಖ್ಯಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಯಾದಗಿರಿ ರವರು ದಿನಾಂಕ:12/8/2011ರ ಅದೇಶದಿಂದ ಕಂಡುಬಂದಿರುತ್ತದೆ.

15. ಮೇಲ್ಕಂಡ ಸಂದರ್ಭಗಳಲ್ಲಿ, ಆಪಾದಿತ ಸರ್ಕಾರಿ ನೌಕರರು ಸರಿಯಾದ, ತೃಪ್ತಿಕರವಾದ ಉತ್ತರ ಅಥವಾ ವಿವರಣೆ ಅಥವಾ ಲೆಕ್ಕ ನೀಡಿರುವುದಿಲ್ಲ.

16. ಸಾಕ್ಷಿದಾರರ ಹೇಳಿಕೆಗಳಿಂದ, ದೂರು ಅರ್ಜಿ ಹಾಗೂ ಆರೋಪ ಪಟ್ಟಿಯಲ್ಲಿ ಕಾಣಿಸಿರುವ ಸಂಗ್ರಹವಾದ ಆಧಾರಗಳಿಂದಾಗಿ ಆಪಾದಿತ ಸರ್ಕಾರಿ ನೌಕರರು ತನ್ನ ಸ್ವಂತ ಲಾಭಕ್ಕಾಗಿ ರೂ.2,22,000/-ಗಳನ್ನು ಉಪಯೋಗಿಸಿಕೊಂಡು ಗ್ರಾಮ ಪಂಚಾಯಿತಿಯ ಸಂಪೂರ್ಣ ಸ್ವಚ್ಛತಾ ಆಂದೋಲನಾ ಯೋಜನೆ ಅಡಿಯಲ್ಲಿನ ಹಣವನ್ನು ಕೆಲಸಕ್ಕೆ ಉಪಯೋಗಿಸದೇ ತನ್ನ ಸ್ವಂತಕ್ಕಾಗಿ ಉಪಯೋಗಿಸಿಕೊಂಡು ಯೋಜನೆಗೆ ಮತ್ತು ಸರ್ಕಾರಕ್ಕೆ ಮೋಸ ಮಾಡಿರುವುದು ಮೇಲ್ನೋಟಕ್ಕೆ ಕಂಡುಬಂದಿದ್ದು, ಆಪಾದಿತ ಸರ್ಕಾರಿ ನೌಕರರ ವಿರುದ್ಧ ಇಲಾಖಾ ವಿಚಾರಣೆ ನಡೆಸುವ ಸಂಬಂಧ ಮುಂದುವರಿಯುವುದು ಅಗತ್ಯವೆಂದು ಕಂಡುಬಂದಿರುತ್ತದೆ. ಆಪಾದಿತ ಸರ್ಕಾರಿ ನೌಕರರು ಸರ್ಕಾರಿ ನೌಕರರಾಗಿ ತಮ್ಮ ಕರ್ತವ್ಯ ಪಾಲನೆಯಲ್ಲಿ ಕರ್ತವ್ಯ ನಿಷ್ಠೆಯನ್ನು ತೋರಿಸದೇ ಮತ್ತು ಸಾರ್ವಜನಿಕ ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಿರುವುದು ವೇದ್ಯವಾಗುತ್ತದೆ.

17. ನಂತರ, ಆಪಾದಿತ ಸರ್ಕಾರಿ ನೌಕರರಿಗೆ ವೀಕ್ಷಣಾ ಟಿಪ್ಪಣಿಯನ್ನು ಕಳುಹಿಸಿ, ಅವರ ದುರ್ನಡತೆಯ ಬಗ್ಗೆ ಇಲಾಖಾ ವಿಚಾರಣೆ ಕೈಗೊಳ್ಳುವ ಸಂಬಂಧ, ಶಿಸ್ತು ಪ್ರಾಧಿಕಾರಕ್ಕೆ ಏಕೆ ಶಿಫಾರಸ್ಸು ವರದಿ ಕಳುಹಿಸಬಾರದು ಎಂಬುದರ ಬಗ್ಗೆ ವಿವರಣೆಯನ್ನು/ಕಾರಣವನ್ನು ಆಪಾದಿತ ಸರ್ಕಾರಿ ನೌಕರರಿಂದ ಕೇಳಲಾಯಿತು. ಆಪಾದಿತ ಸರ್ಕಾರಿ ನೌಕರರು ವೀಕ್ಷಣಾ ಟಿಪ್ಪಣಿಯ ಮೇಲೆ ಉತ್ತರವನ್ನು ಸಲ್ಲಿಸಿದ್ದು, ಆಪಾದನೆಗಳನ್ನು ಅಲ್ಲಗಳೆದಿರುತ್ತಾರೆ. ವರದಿ ಮತ್ತು ಅದರೊಂದಿಗಿನ ಸಾಕ್ಷ್ಯಗಳ ಹಿನ್ನಲೆಯಲ್ಲಿ ಆಪಾದಿತ ಸರ್ಕಾರಿ ನೌಕರರ ಸಮಜಾಯಿಷಿಯನ್ನು ಒಪ್ಪಲು ಸಾಧ್ಯವಿರುವುದಿಲ್ಲ.

18. ಆದ್ದರಿಂದ, ಆಪಾದಿತ ಸರ್ಕಾರಿ ನೌಕರರು ಸಾರ್ವಜನಿಕ/ಸರ್ಕಾರಿ ನೌಕರರಾಗಿದ್ದು, ತಮ್ಮ ಕರ್ತವ್ಯ ಪರಿಪಾಲನೆಯಲ್ಲಿ ನಿಷ್ಠೆಯನ್ನು ತೋರದೇ, ಕರ್ತವ್ಯಲೋಪವೆಸಗಿ, ದುವರ್ತನೆ ತೋರಿಸಿ, ಸಾರ್ವಜನಿಕ/ಸರ್ಕಾರಿ ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಿರುವುದು ಮೇಲ್ನೋಟಕ್ಕೆ ಕಂಡುಬಂದಿರುವುದರಿಂದ ಕರ್ನಾಟಕ ನಾಗರೀಕ ಸೇವೆ (ನಡತೆ) ನಿಯಮ, 1966ರ ನಿಯಮಗಳು 3(1)(i) ಮತ್ತು (iii) ರನ್ವಯ ಶಿಸ್ತು ಕ್ರಮಕ್ಕೆ ಬಾಧ್ಯರಾಗಿರುತ್ತಾರೆಂದು ಕಂಡುಬಂದಿರುತ್ತದೆ.

19. ಆದುದರಿಂದ, ಆಪಾದಿತ ಸರ್ಕಾರಿ ನೌಕರರಾದ ಶ್ರೀ.ಹಣಮಂತ ಬಿನ್ ಲಕ್ಷ್ಮಣ, ಹಿಂದಿನ ಕಾರ್ಯದರ್ಶಿ, ಖಾನಪುರ ಗ್ರಾಮ ಪಂಚಾಯತ್, ಪ್ರಸ್ತುತ ಕಾರ್ಯದರ್ಶಿ, ಚಟ್ನಳ್ಳಿ ಗ್ರಾಮ ಪಂಚಾಯತ್, ಶಹಾಪುರ ತಾಲ್ಲೂಕ್, ಯಾದಗಿರಿ ಜಿಲ್ಲೆ, ಯಾದಗಿರಿ ಇವರು ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು, 1966ರ, ನಿಯಮ ನಿಯಮ (3)(1) (i) ಮತ್ತು (iii)ನೇ ರಲ್ಲಿ ಹೇಳದಂತೆ, ದುರ್ನಡತೆ/ದುರ್ವರ್ತನೆಯಿಂದ ವರ್ತಿಸಿ, ಶಿಸ್ತುಕ್ರಮಕ್ಕೆ ಬಾಧ್ಯರಾಗಿದ್ದಾರೆಂದು ಮೇಲ್ನೋಟಕ್ಕೆ ಕಂಡುಬಂದಿದ್ದರಿಂದ, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(3) ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ, ಆಪಾದಿತ ಸರ್ಕಾರಿ ನೌಕರರ ವಿರುದ್ಧ ಶಿಸ್ತು ನಡವಳಿಕೆ ಹೂಡಲು ಮತ್ತು ಹಾಗೆಯೇ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿರ್ಬಂಧ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ 14-ಎ ಅಡಿಯಲ್ಲಿ ಮತ್ತು ಆಪಾದಿತ ಸರ್ಕಾರಿ ನೌಕರರು ನಿವೃತ್ತಿ ಹೊಂದಿರುವ ಕಾರಣ,

ನಿಯಮ 214(2)(ಬಿ)(2)ರಡಿ ಇಲಾಖಾ ವಿಚಾರಣೆಗೆ ಶಿಫಾರಸ್ಸು ಮಾಡಲಾಗಿ, ಶಿಸ್ತು ನಡವಳಿಕೆಯನ್ನು ಆಪಾದಿತ ಸರ್ಕಾರಿ ನೌಕರರ ವಿರುದ್ಧ ಹೂಡಿ ಇಲಾಖಾ ವಿಚಾರಣೆಯನ್ನು ಉಲ್ಲೇಖ ಒಂದರ ಆದೇಶದಲ್ಲಿ ಗೌರವಾನ್ವಿತ ಉಪಲೋಕಾಯುಕ್ತ ರವರಿಗೆ ವಹಿಸಿದ್ದು, ಗೌರವಾನ್ವಿತ ಉಪಲೋಕಾಯುಕ್ತ ರವರು ಈ ವಿಚಾರಣಾಧಿಕಾರಿಯನ್ನು ವಿಚಾರಣೆ ನಡೆಸಲು ನೇಮಕಮಾಡಿದ್ದಾರೆ. ಆದ್ದರಿಂದ ನಿಮ್ಮ ವಿರುದ್ಧ ಈ ಆಪಾದನೆ.

20. ಸಮನ್ಸ್ ಮತ್ತು ಆರೋಪಣಾ ಪಟ್ಟಿಯನ್ನು ಆಸನೌ ರವರಿಗೆ ಜಾರಿಯಾಗಿತ್ತು ಸದರಿಯವರು ನಂತರ ಆರೋಪಗಳನ್ನು ನಿರಾಕರಿಸಿ ತಕರಾರು ಸಲ್ಲಿಸಲು ಸಮಯ ಕೇಳಿದ್ದು ಮತ್ತು ಆರ್.ಎನ್ ವಕೀಲರ ಮುಖಾಂತರ ವಕಾಲತ್ತು ಸಲ್ಲಿಸಿದ್ದಾರೆ. ಸುಮಾರು ಮುದ್ದತ್ತುಗಳನ್ನು ನೀಡಿದರೂ ಆಸನೌ ರವರು ಅವರ ವಕೀಲರು ಆಪಾದನೆಗೆ ತಕರಾರು ಸಲ್ಲಿಸಿದ ಕಾರಣ ಆಸನೌ ರವರು ತಕರಾರನ್ನು ಏನೂ ಇಲ್ಲ ಎಂದು ತೆಗದುಕೊಳ್ಳಲಾಯಿತು.

21. ಆ.ಸ.ನೌ ರವರಿಗೆ ದಾಖಲೆಗಳ ಪರಿಶೀಲನೆಗಾಗಿ ಅವಕಾಶ ಕಲ್ಪಿಸಿರುತ್ತದೆ.

22. ಮಂಡನಾಧಿಕಾರಿಗಳು ಆರೋಪಗಳನ್ನು ಸಾಬೀತುಪಡಿಸಲು ತಮ್ಮ ಪರವಾಗಿ ಪಿರ್ಯಾದಿದಾರರನ್ನು ಪ್ರಾ.ಸ-1 ಎಂದು ಮತ್ತು ಅವರ ಮುಖಾಂತರ ನಿ.ಪಿ-1 ಮತ್ತು 2 ದಾಖಲೆಗಳನ್ನು ಗುರುತು ಹಾಕಿಸಿಕೊಂಡಿರುತ್ತಾರೆ. ಚಾ.ಸ-1 ಸಾಕ್ಷಿಯನ್ನು ಪ್ರಾ.ಸ-1 ಎಂದು ಹಾಜರುಪಡಿಸಿದ್ದಾರೆ ಮತ್ತು ಅವರ ಮುಖಾಂತರ ನಿ.ಪಿ-3ನ್ನು ಗುರುತು ಹಾಕಿಸಿಕೊಂಡಿದ್ದಾರೆ. ಆಸನೌ ರವರು ಮತ್ತು ಅವರ ವಕೀಲರು ಗೈರು ಹಾಜರಿದ್ದ ಕಾರಣ ಪ್ರಾ.ಸ-1 ಮತ್ತು ಅವರ ಸಾಕ್ಷ್ಯಕ್ಕೆ ಪಾಟೀ ಸವಾಲು ಏನೂ ಇಲ್ಲ ಎಂದು ತೆಗದುಕೊಳ್ಳಾಯಿತು ಮತ್ತು ಮಂಡನಾಧಿಕಾರಿಗಳ ಸಾಕ್ಷ್ಯ ಅಂತ್ಯಗೊಂಡಿತು ಎಂದು ಪರಿಗಣಿಸಿ ಆಸನೌ ರವರು ಮತ್ತು ಅವರ ಪರ ವಕೀಲರು ಗೈರು ಹಾಜರಿದ್ದ ಕಾರಣ ಅವರ ಪರವಾಗಿ ವಿಚಾರಣಾ ಸಾಕ್ಷ್ಯ ಏನು ಇಲ್ಲ ಎಂದು ತೆಗೆದುಕೊಂಡು ವಿಚಾರಣೆಯನ್ನು ದಿ:02.12.2022ಕ್ಕೆ ಮುಂದೂಡಲಾಯಿತು. ಮಂಡನಾಧಿಕಾರಿಗಳ ವಾದವನ್ನು ಆಲಿಸಲಾಗಿ ಮತ್ತು ಪ್ರಕರಣವನ್ನು ಅಂತಿಮ ವರದಿಗಾಗಿ ಮುಂದೂಡಲಾಯಿತು.

23. ಈ ಕೆಳಕಂಡ ಅಂಶಗಳು ನನ್ನ ನಿರ್ಣಯಕ್ಕೆ ಉದ್ಭವಿಸಿರುತ್ತವೆ.

**ಅಂಶ–1: ವಿಚಾರಣಾ ಪ್ರಾಧಿಕಾರವು ಆಸನೌ ಶ್ರೀ.ಹನಮಂತ ಬಿನ್ ಲಕ್ಷ್ಮಣ, ಹಿಂದಿನ ಕಾರ್ಯದರ್ಶೀ, ಖಾನಾಪುರ ಗ್ರಾಮ ಪಂಚಾಯಿತಿ, ಪ್ರಸ್ತುತ ಕಾರ್ಯದರ್ಶೀ, ಚಟ್ನಳ್ಳಿ ಗ್ರಾಮ ಪಂಚಾಯಿತಿ, ಶಹಪೂರ ತಾಲ್ಲೂಕು, ಯಾದಗಿರಿ ಜಿಲ್ಲೆ (ನಿವೃತ್ತ) ರವರು ಒಬ್ಬ ಸರ್ಕಾರಿ ನೌಕರರಾಗಿದ್ದು, ಕರ್ತವ್ಯದಲ್ಲಿ ದುರ್ನಡತೆವೆಸಗಿ ಹಾಗೂ ಸರ್ಕಾರಿ ಹಣವನ್ನು ದುರುಪಯೋಗಪಡಿಸಿಕೊಂಡಿರುವುದಾಗಿ ಆಪಾದಿಸಲಾದ ಆರೋಪಗಳನ್ನು ಸಾಬೀತುಪಡಿಸಿದ್ದಾರೆಯೇ?**

**ಅಂಶ–2: ಆದೇಶವೇನು?**

24. ಕಡತಗಳನ್ನು ಪರಿಶೀಲಿಸಲಾಯಿತು. ಲಭ್ಯವಿರುವ ಮೌಖಿಕ ಮತ್ತು ಲಿಖಿತ ದಾಖಲೆ ಸಾಕ್ಷ್ಯವನ್ನು ಪರಿಶೀಲಿಸಲಾಯಿತು.

25. ಮೇಲ್ಕಂಡ ಪ್ರಶ್ನೆಗಳಿಗೆ ಕೆಳಗೆ ಚರ್ಚಿಸಿರುವ ಕಾರಣಗಳಿಂದ ಉತ್ತರವು ಈ ಕೆಳಕಂಡಂತಿವೆ.

**ಅಂಶ 1: ಸಕಾರಾತ್ಮಕ.**
**ಅಂಶ 2: ಅಂತಿಮ ಆದೇಶದಂತೆ.**

:: **ಕಾರಣಗಳು** ::

26. **ಅಂಶ 1:–** ಮಂಡನಾಧಿಕಾರಿಗಳು ಆರೋಪಗಳನ್ನು ಸಾಬೀತುಪಡಿಸಲು ದೂರುದಾರರು ಪ್ರಾ.ಸ–1 ಸಾಕ್ಷ್ಯವನ್ನು ಹಾಜರುಪಡಿಸಿದ್ದು ಸದರಿಯವರು ತಮ್ಮ ದೂರಿನಲ್ಲಿ 2010–11 ರ ಸಾಲಿನಲ್ಲಿ ಶಹಾಪೂರ ಪಂಚಾಯಿತಿಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾಗ, ಶಹಾಪೂರ ಪೋಲೀಸ್ ಠಾಣೆಯಲ್ಲಿ ಆಸನೌ ರವರು ಹಣ ದುರ್ಬಳಕೆ ಮಾಡಿಕೊಂಡ ಬಗ್ಗೆ ದೂರು ಸಲ್ಲಿಸಲಾಗಿದ್ದು ಅದನ್ನು ನಿ.ಪಿ–1 ಎಂದು ಗುರುತುಪಡಿಸಿಕೊಂಡು ಮತ್ತು ಸುಬ್ರಹ್ಮಣ್ಯ ಅವರ ದೂರನ್ನು ನಿ.ಪಿ–2 ಎಂದು ಗುರುತುಪಡಿಸಿಕೊಂಡಿದ್ದಾರೆ. ಸದರಿ ಗ್ರಾಮ ಸ್ವಚ್ಛತಾ ಯೋಜನೆಯಲ್ಲಿ ರೂ.2,22,000/– ಅನುದಾನ ಮಂಜೂರಾಗಿದ್ದು ಅದರ ವಿವರಗಳು ನನಗೆ ಗೊತ್ತಿಲ್ಲ ಎಂದು ಮತ್ತು ಆಸನೌ ರವರು ತಮ್ಮ ಕಾರ್ಯ ಅವಧಿಯಲ್ಲಿ ಯೋಜನೆಯ ಹಣವನ್ನು ಹಂತ ಹಂತವಾಗಿ ಎಷ್ಟು ಹಣವನ್ನು ಬ್ಯಾಂಕಿನಿಂದ ತೆಗೆದು ದುರುಪಯೋಗ ಮಾಡಿದ್ದು ಮಾತ್ರ ದೂರು ಸಲ್ಲಿಸಿದಿದ್ದು ಎಂದು

ಸಾಕ್ಷ್ಯ ನುಡಿದಿದ್ದಾರೆ. ಅವು ಸಾಕ್ಷ್ಯ ಪಾಟೀ ಸವಾಲಿಗೆ ಒಳಪಟ್ಟಿಲ್ಲ ಏಕೆಂದರೆ ಆಸನೌ ಹಾಗೂ ಅವರ ಪರ ವಕೀಲರು ಗೈರು ಹಾಜರಿದ್ದರು.

27. ಪ್ರಾ.ಸ-2 ಅಂದಿನ ಸಹಾಯಕ ನಿರ್ದೇಶಕರು ವೆಟರ್‌ನರಿ ಆಸ್ಪತ್ರೆ ಬಳ್ಳಾರಿ ರವರು ತಮ್ಮ ಸಾಕ್ಷ್ಯದಲ್ಲಿ ತಾವು 2014-15 ರವರೆಗೆ ಯಾದಗಿರಿಯ ಪಶು ಸಂಗೋಪಣೆ ಮತ್ತು ಪಶು ವೈದ್ಯ ಸೇವಾ ಇಲಾಖೆಯಲ್ಲಿ ಕಾರ್ಯ ನಿರ್ವಹಿಸಿದ್ದು ಅಂದಿನ ಮುಖ್ಯ ಕಾರ್ಯದರ್ಶಿಗಳು ಜಿಲ್ಲಾ ಪಂಚಾಯಿತಿ ಯಾದಗಿರಿ ರವರು ಪತ್ರ ಮುಖೇನ ಹಿಂದಿನ ಶಹಾಪೂರ ತಾಲ್ಲೂಕಿನ ಪಂಚಾಯಿತಿಯಲ್ಲಿ ಪಿಡಿಓ ಆಗಿದ್ದ ಆಸನೌ ರವರ ಮೇಲಿನ ಆರೋಪಗಳನ್ನು ವಿಚಾರಣೆ ಮಾಡಿ ವರದಿ ಸಲ್ಲಿಸಲು ಕೇಳಿಕೊಂಡಿದ್ದು, ಈ ಬಗ್ಗೆ ವಿಚಾರಣೆಯನ್ನು ಕೈಗೊಂಡು ಸದರಿ ವಿಚಾರಣೆಯಲ್ಲಿ ಆರೋಪಿತರರಾದ ಶ್ರೀ ಸುಬ್ರಹ್ಮಣ್ಯ ರವರು ಲಿಖಿತ ಹೇಳಿಕೆಯನ್ನು ಸಲ್ಲಿಸಿದ್ದು ಮತ್ತು ಫಿರ್ಯಾದಿದಾರರು ಗೈರು ಹಾಜರಿದ್ದು 2010-11 ನೇ ಸಾಲಿನಲ್ಲಿ ಸಂಪೂರ್ಣ ಸ್ವಚ್ಛತಾ ಆಂದೋಲನಾ ಮಂಜೂರಾದ ರೂ.2,22,000/-ಗಳನ್ನು ಹಂತ ಹಂತವಾಗಿ ಆಸನೌ ರವರು ದುರುಪಯೋಗ ಪಡಿಸಿಕೊಂಡಿರುತ್ತಾರೆ ಮತ್ತು ಈ ಬಗ್ಗೆ ತಾಲ್ಲೂಕು ನಿರ್ವಹಣಾಧಿಕಾರಿ ಶಹಾಪೂರದ ವಡಗೇರಾ ಪೋಲೀಸ್ ಠಾಣೆಯ ಬಾ.ದಂಸಂ. ಕಲಂ 406,408,425 ಪ್ರಕರಣ ದಾಖಲಾಗಿದ್ದು ನ್ಯಾಯಾಲಯದಲ್ಲಿ ಇನ್ನು ಪ್ರಕರಣ ವಿಚಾರಣೆಯಲ್ಲಿ ಇದೆ. ಮುಂದುವರೆದು ಅವರ ವೈಯಕ್ತಿಕ ಇಲಾಖಾ ತನಿಖೆಯಲ್ಲಿ ಯಾವುದೇ ಹಣ ದುರ್ಬಳಕೆ ಆಗಿದ್ದು ತಮಗೆ ಕಂಡು ಬಂದಿಲ್ಲ ಮತ್ತು ಈ ಬಗ್ಗೆ ನಿ..ಪಿ-3 ರಲ್ಲಿ ವರದಿ ಸಲ್ಲಿಸಿರುವುದಾಗಿ ಸಾಕ್ಷ್ಯ ನುಡಿದಿದ್ದಾರೆ.

28. ಪ್ರಾ.ಸ-1 ಮತ್ತು 2 ಮತ್ತು ಅವರು ಹಾಜರುಪಡಿಸಿದ ದಾಖಲೆ ನಿ.ಪಿ-1 ರಿಂದ ನಿ.ಪಿ-3 ನ್ನು ಗಮನಿಸಿದಾಗ ಪ್ರಾ.ಸ-1 ರೊಂದಿಗೆ ಕಾರ್ಯ ನಿರ್ವಾಹಕ ಅಧಿಕಾರಿಗಳು ಶಹಾಪೂರ ತಾಲ್ಲೂಕು ಗ್ರಾಮ ಸ್ವಚ್ಛತಾ ಯೋಜನೆಯಲ್ಲಿ ಪಂಚಾಯಿತಿ ಅಧ್ಯಕ್ಷ್ಯರೊಂದಿಗೆ ಶಾಮೀಲಾಗಿ ಆಸನೌ ರವರು ರೂ.2,22,000/- ಗ್ರಾಮ ಪಂಚಾಯಿತಿ ಬ್ಯಾಂಕ್ ಖಾತೆಗೆ ಜಮಾ ಮಾಡಿದ್ದು ಆಸನೌ ರವರು ಮುಂದಿನ ಪಿಡಿಓ ರವರಿಗೆ ಪ್ರಭಾರಿ ನೀಡದೆ ತಮ್ಮ ಕಡೆಗೆ ಚೆಕ್ ಬುಕ್‌ಗಳನ್ನು ಇಟ್ಟುಕೊಂಡು ಹಣ ಬ್ಯಾಂಕಿನಿಂದ ತೆಗೆದಿದ್ದು ಕಂಡು ಬಂದಿದ್ದು, ಆಸನೌ ರವರ ಮೇಲೆ ಕ್ರಿಮಿನಲ್ ಪ್ರಕರಣ ದಾಖಲಿಸಬೇಕೆಂದು ಕೇಳಿಕೊಂಡಿದ್ದು ಕಂಡು ಬಂತು. ಅದರ ಆಧಾರದಲ್ಲಿ ವಡಗೇರಾ ಠಾಣಾ ಅಪರಾಧ ಕ್ರ.ಸಂ.79/2011 ರಡಿಯಲ್ಲಿ ಪ್ರಕರಣ ದಾಖಲಿಸಿ ತನಿಖೆ ಕೈಗೊಂಡಿದ್ದು ಕಂಡು ಬಂತು.

29. ಅದೇ ರೀತಿ ನೂತನ ಪಿಡಿಓ ಕಾರ್ಯ ನಿರ್ವಾಹಕ ಅಧಿಕಾರಿಗಳು ತಾಲ್ಲೂಕು ಪಂಚಾಯಿತಿಗೆ ಆಸನೌ ರವರ ಮೇಲೆ ಹಣ ದುರುಪಯೋಗದ ಬಗ್ಗೆ ದೂರು ನೀಡಿದ್ದು ಕಂಡು ಬಂತು.

30. ಈ ಎರಡು ದಾಖಲೆಗಳನ್ನು ಪರಿಶೀಲಿಸಿದಾಗ ಆಸನೌ ರವರ ಮೇಲೆ ಹಣ ದುರ್ಬಳಕೆ ಬಗ್ಗೆ ಪ್ರಕರಣ ದಾಖಲಾಗಿದ್ದ ಬಗ್ಗೆ ಕಂಡು ಬರುತ್ತಿದೆ.

31. ಪ್ರಾ.ಸ–2 ರವರು ತಮ್ಮ ಸಾಕ್ಷ್ಯದಲ್ಲಿ ತಮ್ಮ ವಿವರವಾದ ತನಿಖಾ ವರದಿ ನಿ.ಪಿ–3 ನ್ನು ಹಾಜರುಪಡಿಸಿದ್ದು ಪು.ಸಂ 103–107 ರಲ್ಲಿ ಸದರಿ ದಾಖಲೆಗಳನ್ನು ಪರಿಶೀಲಿಸಿದಾಗ ಈ ಕೆಳಕಂಡ ವಾಸ್ತವಾಂಶಗಳು ಕಂಡು ಬರುತ್ತಿವೆ. ನಿ.ಪಿ–3 ಇಲಾಖಾ ತನಿಖೆ ವರದಿಯಾಗಿದೆ.

32. ಪ್ರಾ.ಸ–1 ರವರ ಮುಖ್ಯ ವಿಚಾರಣೆ ಮತ್ತು ಪಾಟೀ ಸವಾಲನ್ನು ಗಮನಿಸಿದಾಗ ಸದರಿಯವರು ಸುಬ್ಯಹ್ಮಣ್ಯ ಎನ್ನುವವರು ತಮ್ಮ ಮುಂದೆ ದಿ:29.06.2011 ರಂದು ದೂರು ಕೊಟ್ಟಿದ್ದು ಅದರ ಆಧಾರದಲ್ಲಿ ತಾವು ವಡಗೇರಾ ಪೋಲೀಸ್ ಠಾಣೆಗೆ ದೂರು ಸಲ್ಲಿಸಿದ ನಕಲನ್ನು ಹಾಜರುಪಡಿಸಿದ್ದಾರೆ. ಅದನ್ನು ನಿ.ಪಿ–1 ಎಂದು ಗುರುತಿಸಲಾಗಿದೆ. ನಿ.ಪಿ–2 ಅಂದಿನ ಗ್ರಾಮ ಪಂಚಾಯಿತಿ ಪಿಡಿಓ ಆಗಿದ್ದು ದಿ:28.6.2011 ರಂದು ದೂರಿನ ವಿವರಗಳನ್ನು ಬರೆದು ಸುಬ್ರಹ್ಮಣ್ಯ ಶೆಟ್ಟಿ, ಪಿಡಿಓ ರವರು ಮಾಡಿದ ಆರೋಪದ ಮೇಲೆ ದೂರು ಸಲ್ಲಿಸಿದ್ದು ಕಂಡು ಬರುತ್ತಿದೆ.

33. ಪ್ರಾ.ಸ–1 ತಮ್ಮ ಮುಖ್ಯ ವಿಚಾರಣೆಯ ಯೋಜನೆಯಲ್ಲಿ ಕಾಮಗಾರಿ ಆದ ಬಗ್ಗೆ ನನಗೆ ಗೊತ್ತಿಲ್ಲ. ಸುಬ್ರಹ್ಮಣ್ಯ ಶೆಟ್ಟಿ, ಪಿಡಿಓ ರವರು ರಜೆಯ ಮೇಲೆ ಇದ್ದರು. ಆಸನೌ ರವರು ಹಂತ ಹಂತವಾಗಿ ಹಣ ಬ್ಯಾಂಕಿನಿಂದ ತೆಗೆದು ಯಾವ ದಿನಾಂಕದಂದು ಎಷ್ಟು ಹಣ ತೆಗೆದು ದುರುಪಯೋಗ ಮಾಡಿದ್ದು ಎಂಬ ಬಗ್ಗೆ ದೂರಿನಲ್ಲಿ ನಮೂದಿಸಿದ್ದಾಗಿ ನುಡಿದಿದ್ದಾರೆ.

34. ಸದರಿ ದೂರು ನಿ.ಪಿ–1 ರಲ್ಲಿ ಹನುಮಂತ, ಲಕ್ಷ್ಮಣ ಆಸನೌ ರವರು ಯೋಜನೆಗೆ ಸಂಬಂಧಪಟ್ಟ ಚೆಕ್‌ಗಳನ್ನು ಪ್ರಭಾರವನ್ನು ನೂತನವಾಗಿ ತೆಗೆದುಕೊಂಡ ಸುಬ್ರಹ್ಮಣ್ಯ ರವರಿಗೆ ನೀಡಿರುವುದಿಲ್ಲ ಮತ್ತು ಚೆಕ್ ಬುಕ್‌ನ್ನು ಆಸನೌ ರವರು ಇಟ್ಟುಕೊಂಡಿದ್ದಾರೆಂದು ಮತ್ತು ದಿ: 11.3.2011, 12.3.2011 ಹಾಗೂ 14.3.2011 ಪ್ರಕಾಶ ಮತ್ತು ರಾಮು ಎನ್ನುವ ಹೆಸರಿನಲ್ಲಿ ಹಣ ಪಡೆದುಕೊಂಡು ಹಣ ದುರ್ಬಳಕೆ ಮಾಡಿಕೊಂಡಿದ್ದಾರೆಂದು ಆರೋಪ ಮಾಡಲಾಗಿದೆ.

35. ನಿ.ಪಿ-3 ಪ್ರಾಸ.-2 ರವರು ಸಲ್ಲಿಸಿದ ಜಿಲ್ಲಾ ಪಂಚಾಯಿತಿ ಆಂತರಿಕ ಇಲಾಖಾ ತನಿಖಾ ವರದಿಯಾಗಿದ್ದು, ಅದರಲ್ಲಿ ತನಿಖೆಯನ್ನು ಸುಬ್ರಹ್ಮಣ್ಯ ಶೆಟ್ಟಿ, ಅಂದಿನ ಪಿಡಿಓ ವಡಗೇರಾ ಇವರ ಮೇಲೆ ವಿಚಾರಣಾ ಕೈಗೊಂಡಿದ್ದು, ಅದರಲ್ಲಿ ಸದರಿ ಸುಬ್ರಹ್ಮಣ್ಯ ಶೆಟ್ಟಿ ರವರು ಯಾವುದೇ ಹಣ ದುರ್ಬಳಕೆ ಮಾಡಿಲ್ಲ ಮತ್ತು ಕರ್ತವ್ಯ ಲೋಪ ಮಾಡಿಲ್ಲವೆಂದು ಕಂಡು ಬಂದಿದ್ದು, ಆದರೆ ಸದರಿ ಪಿಡಿಓ ಸುಬ್ರಹ್ಮಣ್ಯ ಶೆಟ್ಟಿ ರವರಿಗೆ ಎಚ್ಚರಿಕೆ ನೋಟೀಸ್ ನೀಡಬಹುದಾಗಿದೆ ಎಂದು ವರದಿ ಸಲ್ಲಿಸಿದ್ದಾರೆ.

36. ಎಲ್ಲಾ ದಾಖಲೆಗಳನ್ನು ಪರಿಶೀಲಿಸಿದಾಗ ಆಸನೌ ಹನಮಂತಪ್ಪ ರವರು ಹಣ ದುರ್ಬಳಕೆ ಮಾಡಿದ್ದಾರೆಂದು ಆರೋಪ ಮಾಡಿದ್ದರೂ ಅದಕ್ಕೆ ಪೂರಕವಾಗಿ ಮಂಜೂರಾದ ಯೋಜನೆ ದಾಖಲೆಗಳು ಮತ್ತು ಮೂರು ಹಂತದಲ್ಲಿ ಹಣವನ್ನು ಚೆಕ್ ಮುಖಾಂತರ ಬ್ಯಾಂಕ್ ನಿಂದ ಪಡೆದ ಬಗ್ಗೆ  ಮತ್ತು ಲೆಕ್ಕ ಪರಿಶೋಧನಾ ವರದಿ ಬಗ್ಗೆ ಯಾವುದೇ ದಾಖಲೆಗಳನ್ನು ಸಲ್ಲಿಸಿಲ್ಲ.

37. ವಿಚಾರಣಾ ಆರೋಪದ ಪ್ರಕಾರ 2010-11 ನೇ ಸಾಲಿನ ಸ್ವಚ್ಛತಾ ಆಂದೋಲನಾ ಯೋಜನೆ ಮಂಜೂರಾದ ಹಣವನ್ನು ರೂ.2,22,000/- ಗಳನ್ನು ಆಸನೌ ರವರು ನೂತನವಾಗಿ ನೇಮಕಗೊಂಡ ಪಿಡಿಓ ಸುಬ್ರಹ್ಮಣ್ಯ ಶೆಟ್ಟಿ ರವರಿಗೆ ಪ್ರಭಾರಿ ನೀಡದೇ 3 ಚೆಕ್‌ಗಳನ್ನು ನೀಡಿ ರೂ.2,22,000/- ಗಳನ್ನು ಪಡೆದು ನಿ.ಪಿ-1 ಸ್ಥಳೀಯ ಪೋಲೀಸ್‌ರೊಂದಿಗೆ ನೀಡಿದ ದೂರಿನಲ್ಲಿ ಕಂಡು ಬರುತ್ತಿದೆ.

38. ಅದೇ ರೀತಿ ವಡಗೇರಾ ಪೋಲೀಸ್ ಠಾಣೆ ಅಧಿಕಾರಿಗಳು ತಮ್ಮ ಠಾಣಾ ಅಪರಾಧ ಕ್ರಮ ಸಂ.79/2021 ಬಾ.ದಂ.ಸಂ. ಕಲಂ ಸಂಖ್ಯೆ 406,408,425 ರಲ್ಲಿ ದಾಖಲೆ ಮಾಡಿಕೊಂಡು ತನಿಖೆ ಕೈಗೊಂಡಿದ್ದು ವ್ಯಕ್ತವಾಗುತ್ತಿದೆ. ಈ ತನಿಖೆ ಮುಂದುವರೆದು ಯಾವ ಸ್ವರೂಪ ಪಡೆದಿದೆ ಎಂಬ ಬಗ್ಗೆ ಯಾವುದೇ ದಾಖಲೆ ಕಂಡು ಬರುತ್ತಿಲ್ಲ ಮತ್ತು ಇದಕ್ಕೆ ಪ್ರತಿಯಾಗಿ ರಕ್ಷಣಾತ್ಮಕವಾಗಿ ಆಸನೌ ರವರಿಗೆ ಸಮನ್ಸ್ ಜಾರಿಯಾದ್ದು, ಆರ್.ಎನ್ ವಕೀಲರ ಮುಖಾಂತರ ಹಾಜರಾಗಿ ನಂತರ ದೋಷಾರೋಪಣಾ ಪಟ್ಟಿಗೆ ಯಾವುದೇ ತಕರಾರನ್ನು ದಾಖಲು ಮಾಡಿಲ್ಲ ಮತ್ತು ಪ್ರಾ.ಸ-1 ರವರ ಸಾಕ್ಷ್ಯವನ್ನು ಹಾಜರು ಪಡಿಸಿ ಸಾಕ್ಷಿಗಳ ಪಾಟೀ ಸವಾಲಿಗೆ ಒಳಪಡಿಸಿಲ್ಲ ಮತ್ತು ಅವರ ಪಾಟೀ ಸವಾಲುಗಳನ್ನು ಏನೂ ಇಲ್ಲ ಎಂದು ತೆಗೆದುಕೊಳ್ಳಲಾಯಿತು.

39. ಆಸನೌ ರವರ ಮೇಲೆ ಹಣ ದುರ್ಬಳಕೆ ಬಗ್ಗೆ ಸ್ಥಳೀಯ ಪೋಲೀಸ್ ಠಾಣೆ ಸರ್ಕಾರಿ ಇಲಾಖಾ ಹಣವನ್ನು ಚೆಕ್ ಮುಖಾಂತರ ನಿಯಮಗಳನ್ನು ಪಾಲಿಸದೇ ಪಡೆದುಕೊಂಡು ದುರ್ಬಳಕೆ ಮಾಡಿಕೊಂಡಿದ್ದು ಸ್ಪಷ್ಟವಾಗಿ ವ್ಯಕ್ತವಾಗುತ್ತಿದೆ.

ಹಾಜರುಪಡಿಸಿದ ಎಲ್ಲಾ ದಾಖಲೆಗಳಿಗೆ ಪ್ರತಿರೋಧ ವ್ಯಕ್ತಪಡಿಸಿ ಆಸನೌ ರವರು ದೋಷಾರೋಪಣಾ ಪಟ್ಟಿಗೆ ತಮ್ಮ ಯಾವುದೇ ಆಕ್ಷೇಪಣೆಯನ್ನು ಸಲ್ಲಿಸಿಲ್ಲ ಮತ್ತು ಹಾಜರುಪಡಿಸಿದ ಯಾವುದೇ ಸಾಕ್ಷ್ಯ ಪ್ರಾ.ಸ-1 ಮತ್ತು ಪ್ರಾ.ಸ-2 ರವರು ಮೌಖಿಕ ಸಾಕ್ಷ್ಯವನ್ನು ವಿರೋಧಿಸಿ ಪಾಟೀ ಸವಾಲನ್ನು ಕೈಗೊಂಡಿಲ್ಲ.

40. ಮೇಲೆ ಮಾಡಿದ ಎಲ್ಲಾ ಆರೋಪಗಳನ್ನು ಮತ್ತು ದಾಖಲೆಗಳನ್ನು ಕೂಲಂಕುಷವಾಗಿ ಪರಿಶೀಲಿಸಿ ಪ್ರಾಸ-1 ಮತ್ತು ಪ್ರಾಸ -2 ರವರ ಸಾಕ್ಷ್ಯ ಪಾಟೀ ಸವಾಲಿಗೆ ಒಳಪಡದೇ ಇರುವುದು ಗಮನಕ್ಕೆ ತೆಗದುಕೊಂಡು ಪ್ರಾ.ಸ-1 ಹಾಗೂ ಪ್ರಾ.ಸ-2 ರವರ ಮೌಖಿಕ ಸಾಕ್ಷಿ ಮತ್ತು ನಿ.ಪಿ-1 ರಿಂದ 3 ದಾಖಲೆಗಳನ್ನು ಕೂಲಂಕುಷವಾಗಿ ಗಮನಕ್ಕೆ ತೆಗೆದುಕೊಂಡು ಆಸನೌ ರವರ ಮೇಲೆ ಮಾಡಿದ ಆರೋಪಗಳು ಬಹುಸಂಖ್ಯಾಕಾರದಲ್ಲಿ ಸಾಧ್ಯತೆಗಳಲ್ಲಿ ಸಾಬೀತಾಗಿವೆ ಎಂದು ಗಮನಕ್ಕೆ ತೆಗೆದುಕೊಂಡು ಮೇಲಿನ ಅಂಶವನ್ನು ಸಕರಾತ್ಮಕವಾಗಿದೆ ಎಂದು ಈ ಕೆಳಗಿನಂತೆ ಆದೇಶ ಮಾಡಲಾಗಿದೆ.

41. <u>ಅಂಶ-2:</u> **ಈ ಮೇಲ್ಕಂಡ ಕಾರಣಗಳಿಗಾಗಿ, ಈ ಕೆಳಕಂಡಂತೆ ಆದೇಶ ಮಾಡಲಾಗಿದೆ.**

<u>:: ನಿರ್ಣಯ ::</u>

"ಆಸನೌ ಶ್ರೀ.ಹನಮಂತ ಬಿನ್ ಲಕ್ಷ್ಮಣ, ಹಿಂದಿನ ಕಾರ್ಯದರ್ಶೀ, ಖಾನಾಪುರ ಗ್ರಾಮ ಪಂಚಾಯಿತಿ, ಪ್ರಸ್ತುತ ಕಾರ್ಯದರ್ಶೀ, ಚಟ್ನಳ್ಳಿ ಗ್ರಾಮ ಪಂಚಾಯಿತಿ, ಶಹಪೂರ ತಾಲ್ಲೂಕು, ಯಾದಗಿರಿ ಜಿಲ್ಲೆ (ನಿವೃತ್ತ) ಇವರ ಮೇಲೆ ಶ್ರೀ.ಹೆಚ್.ಮಲ್ಲಿಕಾರ್ಜುನ, ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯಿತಿ, ಶಹಪೂರ ಜಿಲ್ಲೆ ರವರಿಂದ ಆಪಾದಿಸಲಾದ ಕರ್ತವ್ಯ ಲೋಪದ ಆರೋಪಗಳನ್ನು ಸಾಬೀತುಪಡಿಸಲು ಶಿಸ್ತು ಪ್ರಾಧಿಕಾರವು ಸಫಲವಾಗಿದೆ ಎಂದು ನಿರ್ಣಯಿಸಲಾಗಿದೆ.

ಈ ವರದಿಯನ್ನು ಮಾನ್ಯ ಉಪಲೋಕಾಯುಕ್ತರವರಿಗೆ ಮುಚ್ಚಿದ ಲಕೋಟೆಯಲ್ಲಿ ಗೌರವ ಪರಿಗಣನೆಗೆ ಸಲ್ಲಿಸಲು ಕಛೇರಿಗೆ ಆದೇಶಿಸಲಾಗಿದೆ".

9/12/20

(ರಾಜಶೇಖರ.ವಿ.ಪಾಟೀಲ)
ಅಪರ ನಿಬಂಧಕರು ವಿಚಾರಣೆಗಳು-7,
ಕರ್ನಾಟಕ ಲೋಕಾಯುಕ್ತ,
ಬೆಂಗಳೂರು.

# ANNEXURES

## 1. LIST OF WITNESSES EXAMINED ON BEHALF OF DISCIPLINARY AUTHORITY:

| | |
|---|---|
| PW1 | Sri H.Mallikarjun, Executive Engineer, Rural Water Supply Division Yadagiri District. (original) |
| PW-2 | Sri T.Venugopal, Bangalore. (original) |

## 2. LIST OF WITNESSES EXAMINED ON BEHALF OF DELINQUENT GOVERNMENT OFFICIALS:

| | |
|---|---|
| Ex.P1 | Letter of EO dated 28.6.2021 (Xerox copy) |
| Ex.P2 | Letter of Panchayath Development Officer dated 28.6.2011 (Xerox Copy) |
| Ex.P3 | Compliance report of Deputy Director (Xerox copy) |

(RAJASHEKAR.V.PATIL)
Additional Registrar Enquiries-8
Karnataka Lokayukta,
Bengaluru.